# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂಃ **419/2019**

ಸಿ.ಡಬ್ಲ್ಯೂಃ 08 ಪಿಡಬ್ಲ್ಯೂಃ 02

| | |
|---|---|
| ಸಾಕ್ಷಿದಾರರ ಹೆಸರುಃ | ಚೌಟಗಿ ಪ್ರಕಾಶ ತಂದೆಃ ನಿಂಗಪ್ಪ. |
| ವಯಸ್ಸುಃ | 40 ವರ್ಷ |
| ಉದ್ಯೋಗಃ | ವ್ಯವಸಾಯ, |
| ಸಾಕೀನಃ | ಹೊಳಲು. |

ದಿಃ **13-06-2023** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

**ಅರೋಪಿತನ ಪರಿಚಯ ನನಗೆ ಇರುತ್ತದೆ, ಆತನು ನಮ್ಮ ಊರಿನವನು. ನಾನು ಈಗ ನೋಡುತ್ತಿರುವ ದಾಖಲೆ ಮೇಲೆ ಸುಮಾರು 3 ವರ್ಷಗಳ ಹಿಂದೆ ಹಳೆ ಬಸ್ ಸ್ಟಾಂಡ್ ನಲ್ಲಿ ಪೋಲೀಸರ ಕೋರಿಕೆಯ ಮೇಲೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಕೃತ್ಯ ಸ್ಥಳದ ಜಪ್ತು ಪಂಚನಾಮೆ ಅಗಿದ್ದು, ಅದನ್ನು ನಿಪಿ-01 ಎಂದು, ಸಾಕ್ಷಿಯ ಸಹಿಯನ್ನು ನಿಪಿ-01 ಎ ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ಸಮಕ್ಷಮ ಯಾವುದೇ ಜಪ್ತು ಪಂಚನಾಮೆಯನ್ನು ಮಾಡಿಲ್ಲ.**

*(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಸ.ಸ.ಅ ರವರಿಂದ ;

**ದಿನಾಂಕ : 04-07-2017 ರಂದು ಮಧ್ಯಾಹ್ನ 03.10 ಗಂಟೆ ಸುಮಾರಿಗೆ ಹಿರೇಹಡಗಲಿ ಪೊಲೀಸರು ಹೊಳಲು ಗ್ರಾಮದಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿರುತ್ತದೆ. ದಾಳಿಗೆ ಹೋಗಲು ಪಂಚರಾಗಿ ಸಹಕರಿಸಬೇಕು ಎಂದು ಕೇಳಿಕೊಂಡ ಮೇರೆಗೆ ನಾನು ಒಪ್ಪಿಕೊಂಡ ಮೇರೆಗೆ ಅವರೊಂದಿಗೆ ಠಾಣಾ ಜೀಪಿನಲ್ಲಿ ಹೊರಟು ಮಧ್ಯಾಹ್ನ 03.20 ಗಂಟೆಗೆ ಹೊಳಲು ಗ್ರಾಮವನ್ನು ತಲುಪಿ ಬಸವೇಶ್ವರ ದೇವಸ್ಥಾಳನದ ಹತ್ತಿರ ವಾಹನವನ್ನು ನಿಲ್ಲಿಸಿ ಮರೆಮಾಚಿ ನೋಡಲಾಗಿ ಒಬ್ಬ ವ್ಯಕ್ತಿ ರಟ್ಟಿನ ಡಬ್ಬದಲ್ಲಿ ಮಧ್ಯದ ಬಾಟಲಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿ ಹಣ ಪಡೆಯುತ್ತಿದ್ದನ್ನು ಖಚಿತಪಡೆಸಿಕೊಂಡು ಆತನ**

ಹೆಸರು ವಿಳಾಸ ವಿಚಾರಿಸಲಾಗಿ ಗುಜ್ಜರ ಸತೀಶ ತಂದೆ ಪಾಡುರಂಗ ಹೊಳಲು ಎಂದು ಖಾತ್ರಿ ಪಡೆಸಿಕೊಂಡು ಆತನ ಬಳಿ ಇದ್ದ ಮದ್ಯದ ಡಬ್ಬವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ **180** ಎಮ್.ಎಲ್.ನ ಕೊಡಾಯ್ಸ ತ್ರಿಬಲ್ ಎಕ್ಸ್ ನ ರಮ್ ನ **12** ಪೌಚಗಳು ಮತ್ತು **180** ಎಮ್.ಎಲ್.ನ ನಂಬರ **01** ಹೈವೇ ವಿಸ್ಕೀಯ **10** ಬಾಟಲಗಳು ದೊರೆತಿರುತ್ತವೆ. ಮತ್ತು ಆತನ ಅಂಗ ಶೋಧನೆ ಮಾಡಲಾಗಿ ಮದ್ಯ ಮಾರಾಟದಿಂದ ಬಂದ ಹಣ ರೂ.**1590/-** ನಗದು ಹಣ ದೊರೆತಿರುತ್ತದೆ. ಸದರಿ ಮದ್ಯವನ್ನು ಮತ್ತು ಹಣವನ್ನು ನನ್ನ ಸಮಕ್ಷಮ ಜಪ್ತು ಪಡೆಸಿಕೊಂಡು ಸ್ಥಳದಲ್ಲಿಯೇ ನಿ.ಪಿ.**01** ರಂತೆ ಪಂಚನಾಮೆ ಮಾಡಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಎಂದರೆ ಸರಿಯಲ್ಲ, ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

" ನನ್ನ ಸಮಕ್ಷಮ "
**Sd/-**
(ವೀರೇಶ ಕುಮಾರ ಸಿ.ಕೆ.)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಹಡಗಲಿ.